ಶ್ರೀ ಸಿ. ಬೈರೇಗೌಡ.—ಸ್ವಾಮಿ, ತಾವು ಕೊಟ್ಟಿರುವುದು ಕಂಟ್ರಾಕ್ಟ್ ಅಂತ ಅಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ,—ಇದಕ್ಕೆ ಸರ್ಕಾರದವರು ಒಂದು ಪ್ರೊಸೀಜರ್ ಹಾಕಿ ಕೊಂಡು ಅದರ ಪ್ರಕಾರ ಆ ಕೆಲಸವನ್ನು ಟೆಂಡರ್ ಕರೆಯುದೆಯೇ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಯಾವ ರೇಟ್ ಮೇಲೆ ಕೊಟ್ಟಿದ್ದೀರಿ ? ಮತ್ತು ಯಾವ ಯಾವ ವರ್ಷದಲ್ಲಿ ಕೊಟ್ಟಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಷೆಡ್ಯೂರ್ ರೇಟ್ ಪ್ಲಸ್ 15 ಪರ್ಸೆಂಟ್‌ನಂತೆ ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟ ವಿವರಗಳನ್ನು ನಭೆಯ ಮುಂದಿಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಅವರಿಗೆ ಹಣ ಕೊಡಬೇಕಾದರೆ ಅದಕ್ಕೆ ಬಿಲ್ ಮಾಡಬೇಕು, ಅದನ್ನು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪ್ರೂಡ್ಯೂಸ್ ಮಾಡಬೇಕು, ಇನ್ನೂ ಏನೇನೋ ಪ್ರೊಸೀಜರ್‌ಗಳು ಇವೆ. ಅದನ್ನೆಲ್ಲಾ ಅಡಾಪ್ಟ್ ಮಾಡಿದ್ದಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದೆಲ್ಲಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದಿಂದ ಇವತ್ತು 23 ಲಕ್ಷ 93 ಸಾವಿರದ 600 ರೂಪಾಯಿಗಳನ್ನು ಕೊಟ್ಟಿದ್ದರೂ ಸಕಾಲದಲ್ಲಿ ಅದನ್ನು ಖರ್ಚುಮಾಡಲಿಲ್ಲ. ಇದರಿಂದ ಪ್ರತಿ ವರ್ಷವೂ ಆಯಾ ವರ್ಷದ ಷೆಡ್ಯೂಲ್ ರೇಟ್ ಮತ್ತು 15 ಪರ್ಸೆಂಟ್ ಹಣ ಹೆಚ್ಚಿಗೆ ಕೊಡಬೇಕಾಗುತ್ತದೆ ಇದರಿಂದ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ಕೂಡ ಜಾಸ್ತಿಯಾಗುತ್ತದೆ. ಆದುದರಿಂದ ಇದನ್ನು ಮನಗಂಡು ತಾವು ಇದನ್ನು ಸರಿಪಡಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರಿಗೆ ಇಷ್ಟು ಮಾತ್ರ ಹೇಳಬಯಸುತ್ತೇನೆ. ಒಟ್ಟು ಅಂದಾಜು 2 ಕೋಟಿ 22 ಲಕ್ಷದ 50 ಸಾವಿರ ರೂಪಾಯಿ ಆದರಲ್ಲಿ ನಾವು ಈಗ ಕೊಟ್ಟಿರುವುದು 23,93,600 ರೂಪಾಯಿಗಳು.

ಶ್ರೀ ಕಾಗೋಡು ತಿಮ್ಮಪ್ಪ.—ಅಷ್ಟಾದರೂ ಇನ್‌ವೆಸ್ಟ್ ಆಗಿರಬೇಕಲ್ಲಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದರ ಬಗ್ಗೆ ವಿವರಗಳನ್ನು ನಭೆಯ ಮುಂದಿಡುತ್ತೇನೆ.

Repairs of Bandihalli Tank Bund in Hassan Constituency

441. K. H. HANUMEGOWDA (Hassan) —Will the Minister of State for Minor Irrigation and Protocal, be pleased to state.—

(*a*) whether it has come to the notice of the Government that the Bandihalli Tank Bund Shantigram village of Hassan Constituency, has developed some cracks and the wasteweir of the Tank is also not in good condition;

(*b*) whether the plans and estimates are prepared for repairing this tank bund, if so, the estimated cost ;

(*c*) whether it has come to the notice of the Government that Achkatdars of this tank are loosing crops every year due to non-repair of this tank bund;

SRI H. C. SRIKANTAIAH (Minister of State of Minor Irrigation and Protocal).—

(*a*) No.

(*b*) An estimate for Rs. 9,000 has been prepared.

(*c*) Since, the tank is almost in good condition, the Achkatedars have not been put to trouble of any kind.

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ಈ ಬಂಡಿಹಳ್ಳಿ ಗ್ರಾಮದ ಕೆರೆಯು ಕೋಡಿ, ತೂಬು, ಮತ್ತು ಏರಿ ಶಿಥಿಲವಾಗಿರುವುದರಿಂದ ಇದನ್ನು ಸರಿಪಡಿಸಬೇಕೆಂದು 30 ಸಾವಿರ ರೂಪಾಯಿನ ಒಂದು ಎಸ್ಟಿಮೇಟ್ ಮತ್ತು 9 ಸಾವಿರ ರೂಪಾಯಿನ ಒಂದು ಎಸ್ಟಿಮೇಟ್ ತಯಾರಿಸಿ ಕಳಿಸಲಾಗಿದೆ. ಈ ಎಸ್ಟಿಮೇಟ್‌ಗಳು ಯಾವ ಹಂತೆದಲ್ಲಿವೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ಹೆಚ್ ಸಿ. ಶ್ರೀಕಂಠಯ್ಯ.—35 ಸಾವಿರ ರೂಪಾಯಿಯ ಎಸ್ಟಿಮೇಟ್ ನಮ್ಮಲ್ಲಿಲ್ಲ. ನಮ್ಮಲ್ಲಿರುವುದು 9 ಸಾವಿರ ರೂಪಾಯಿಯ ಎಸ್ಟಿಮೇಟ್; ಇದರಲ್ಲಿ 6 ಸಾವಿರ ರೂಪಾಯಿ ಖರ್ಚಾಗಿದೆ. 35 ಸಾವಿರ ರೂಪಾಯಿ ಎಸ್ಟಿಮೇಟ್ ತಯಾರಾಗಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ.—ಈ 35 ಸಾವಿರ ರೂಪಾಯಿಗಳ ಎಸ್ಟಿಮೇಟ್ ತಯಾರಾಗಿದೆ. ಮಾನ್ಯ ಚನ್ನಬಸಪ್ಪನವರು ಈ ಇಲಾಖೆಯ ಮಂತ್ರಿಗಳಾಗಿದ್ದಾಗ ವಿಧಿನಿಯಮದ ಪ್ರಕಾರ ಇದನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ತಾವು ನೋಡಿದರೆ ಈ ರೀತಿ ಹೇಳುತ್ತೀರಿ. ಇದರಲ್ಲಿ ನಾವು ಯಾರ ಮಾತನ್ನು ನಂಬೋಣ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಆ ಕೆರೆ ಇರುವುದು 35 ಎಕರೆ 19 ಗುಂಟೆ. ಇದು ಎಲ್ಲೆಲ್ಲ ಶಿಥಿಲವಾಗಿದೆ ಅದನ್ನೆಲ್ಲಾ ರಿಪೇರಿ ಮಾಡುವುದಕ್ಕೆ 6,675 ರೂಪಾಯಿಗಳು ಖರ್ಚಾಗಿದೆ. ಇನ್ನು ಉಳಿದದ್ದನ್ನೂ ಖರ್ಚುಮಾಡಿ ರಿಪೇರಿ ಮಾಡಿಸುತ್ತೇನೆ. ಕಳೆದ ಸಾರಿ ಮಳೆ ಬರದೆ, ಕೆರೆಯಲ್ಲಿ ನೀರಿಲ್ಲದೆ ಜನಗಳಿಗೆ ತೊಂದರೆಯಾಯಿತು ಹೊರತು, ಕೆರೆಏರಿ, ತೂಬುಗಳು ಸರಿಯಾಗಿಲ್ಲದೆ, ಕೆರೆಯಲ್ಲಿ ನೀರು ನಿಲ್ಲದೆ ಜನಗಳಿಗೆ ತೊಂದರೆಯಾಗಿಲ್ಲ. ಇನ್ನು 35 ಸಾವಿರ ರೂಪಾಯಿ ಎಸ್ಟಿಮೇಟ್ ಎಂದು ಏನು ಹೇಳುತ್ತಿದ್ದೀರಿ ಅದನ್ನು ಪರಿಶೀಲನೆ ಮಾಡಿ ನೋಡಿ ಅನಂತರ ತಮಗೆ ಹೇಳುತ್ತೇನೆ.

ಶ್ರೀ ಕೆ ಹೆಚ್. ಹನುಮೇಗೌಡ.—ಈ ಎಸ್ಟಿಮೇಟ್ ಮಂಜೂರಾಗಿ ಬಂದರೆ ಎಷ್ಟು ದಿವಸದಲ್ಲಿ ರಿಪೇರಿ ಕೆಲಸ ಮಾಡಿಸಿಕೊಡುತ್ತೀರಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದರ ಬಗ್ಗೆ ನೀವು ಏನೂ ಯೋಚನೆ ಮಾಡಬೇಡಿ. ಅದು ಬಂದಮೇಲೆ ನಾವೇ ಆ ಕೆಲಸ ಮಾಡಿಕೊಡುತ್ತೇವೆ.

3-30 P. M.

Distribution of Sites to Siteless and Houseless persons in Hassan

442. SRI K. H. HANUMEGOWDA (Hassan).—Will the Minister for Municipal Administration and Political Pensions be pleased to state ;

(*a*) the number of siteless and houseless poor persons in Hassan City ;

(*b*) the action taken by the Government to distribute sites to them.

SRI D. K. NAIKAR (Minister of Municipal Administration and Political Pensions).—

(*a*) There are 1,133 persons not having the sites, in Hassan City.